# ಉಮಾಶಂಕರ ಸ್ವಾಮಿ



ಉಮಾಶಂಕರ ಸ್ವಾಮಿ ಎಂಜಿನಿಯರಿಂಗ್ ಪದವೀಧರರು. ರಂಗಭೂಮಿ ಹಾಗೂ ಸಿನಿಮಾ ಅವರ ಕಾರ್ಯಕ್ಷೇತ್ರಗಳು. ರಾಜಸ್ತಾನದ ಗ್ರಾಮೀಣ ಭಾಗಗಳಲ್ಲಿ ನಡೆದ ಅಸಾಂಪ್ರದಾಯಿಕ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯೋಗಗಳಲ್ಲಿ ಭಾಗಿಯಾಗಿದ್ದ ಅವರು, ರಂಗಭೂಮಿಗೆ ಸಂಬಂಧಿಸಿದಂತೆ ಹಲವು ಕಮ್ಮಟಗಳನ್ನೂ ನಡೆಸಿದ್ದಾರೆ. 'ಬನದ ನೆರಳು', 'ಮುನ್ಸೀಫ' ಹಾಗೂ 'ಸಾಲದ ಮಗು' ಅವರ ನಿರ್ದೇಶನದ ಸಿನಿಮಾಗಳು. ಮೂರೂ ಚಿತ್ರಗಳು ಪ್ರಶಸ್ತಿಗಳನ್ನೂ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನದ ಗೌರವವನ್ನೂ ಪಡೆದಿವೆ.

ಮಗು' ಚಿತ್ರದಲ್ಲಿನ ವಿದ್ಯೆಯ ಸ್ವರೂಪ ಶೋಷಣೆಯ ಬಗೆಯದು. ಇಲ್ಲಿನ ಜಮೀನ್ದಾರ ತನ್ನ ಮಗ ಅಕ್ಷರ ಕಲಿಯಲೆಂದು ಆಶಿಸುತ್ತಾನೆ – ಸಾಲದ ಲೆಕ್ಕ ಬರೆಯಲು ಅನುಕೂಲವಾಗಲೆಂದು. ದೀನ – ದಲಿತರನ್ನು ಶೋಷಿಸಲಿಕ್ಕಾಗಿ ಉಳ್ಳವರು ವಿದ್ಯೆಯನ್ನು ಬಳಸಿಕೊಳ್ಳುವ ವಿಪರ್ಯಾಸ ಇಲ್ಲಿಯದು. ದೀನ – ದಲಿತರು ಕೂಡ ವಿದ್ಯಾವಂತರಾದರೆ ಸಮಸ್ಯೆ ಬಗೆಹರಿದೀತು ಎಂದು ಆಶಿಸಬಹುದು. ಆದರೆ, ಶಾಲೆ ಅವರ ಪಾಲಿಗೆ ಐಷಾರಾಮಿಯಾಗಿಯೇ ಉಳಿದಿದೆ. ಶಿಕ್ಷಣ ಮಾತ್ರವಲ್ಲ – ಆರೋಗ್ಯ ಹಾಗೂ ಆನಂದದ ದೃಷ್ಟಿಯಲ್ಲಿಯೂ ಅವರು ವಂಚಿತರೇ. ಸುಖವನ್ನು ಅನುಭವಿಸುವುದು ಒಂದು ವರ್ಗಕ್ಕೆ ಹಕ್ಕಾಗಿ ಪರಿಣಮಿಸಿದ್ದರೆ, ಆ ಸುಖದ ಹಾದಿಯಲ್ಲಿ ದೀನ – ದುರ್ಬಲರು ಮಣ್ಣಾಗಿಹೋಗುತ್ತಾರೆ. ಒಂದೆಡೆ ಹೊಟ್ಟೆ ತುಂಬಿಸಿಕೊಳ್ಳುವ ಅನಿವಾರ್ಯತೆ, ಇನ್ನೊಂದೆಡೆ ಅವರನ್ನು ಅನಕ್ಷರಸ್ಥರನ್ನಾಗಿಯೇ ಉಳಿಸಬಯಸುವ ವರ್ಗವೊಂದರ ಅನಿವಾರ್ಯತೆ. ಈ ಇಕ್ಕಟ್ಟಿನಲ್ಲಿ ನಮ್ಮ ಶಿಕ್ಷಣದ ಮೂಲ ಉದ್ದೇಶವೇ ಮಸುಕಾಗುತ್ತಿರುವುದನ್ನು ಉಮಾಶಂಕರ ಸ್ವಾಮಿ ಸಂಯಮದಿಂದ ಹೇಳುತ್ತಾರೆ. ಸುಬ್ಬನ ಅಂತರಂಗದಲ್ಲಿ ಕೂಡ ಶಾಲೆಯ ಕನಸಿದೆ. ಆದರೆ, ತನ್ನ ಯಜಮಾನನ ಮಗ ಓಬನಂತೆ ಅವನು ಶಾಲೆಗೆ ಹೋಗಲಾರ. ಬದಲಿಗೆ, ಪ್ರಕೃತಿಯನ್ನೇ ಅವನು ತನ್ನ ಶಾಲೆಯನ್ನಾಗಿ ಬದಲಿಸಿಕೊಳ್ಳುತ್ತಾನೆ. ಆದರೆ, ಪ್ರಾಕೃತಿಕ ನ್ಯಾಯದಲ್ಲೂ ಸುಬ್ಬನಿಗೆ ಸೋಲಾಗಿ ಅವನು ಜೀತದ ಕೋಳಕ್ಕೆ ಕಟ್ಟುಬೀಳಬೇಕಾಗುತ್ತದೆ. ಅವನ ಸಾವಿನ ಸಂದರ್ಭದಲ್ಲಿನ – 'ವಸೂಲಾಗದ ಲೆಕ್ಕ' ಎನ್ನುವ ಕೊನೆಯ ನಮೂದು ಮಾನವೀಯತೆಯ ಕುರಿತ ನಮ್ಮ ನಂಬಿಕೆಗಳಿಗೆ ಹೊಡೆದ ಮೊಳೆಯಂತೆ ಕಾಣಿಸುತ್ತದೆ.

'ಮುನ್ಸೀಫ' ಶಿಕ್ಷಣದ ವೈಫಲ್ಯವನ್ನು ಬೇರೊಂದು ನೆಲೆಗಟ್ಟಿನಲ್ಲಿ ಪ್ರಶ್ನಿಸುತ್ತದೆ. ಶಿಕ್ಷಣದಿಂದಾಗಿ ನಮ್ಮ ಬದುಕಿನಲ್ಲಿ ರೂಪುಗೊಳ್ಳಬೇಕಾದ ಮೌಲ್ಯಗಳ ಗೈರುಹಾಜರಿಯನ್ನು 'ಮುನ್ಸೀಫ' ಕಾಣಿಸುತ್ತಾನೆ. 'ಸಾಲದ ಮಗು' ಚಿತ್ರದಲ್ಲಿನ ಭೂಮಾಲೀಕ ಇಲ್ಲಿ ವಕೀಲರ ರೂಪದಲ್ಲಿದ್ದಾನೆ. ಧನಪಿಶಾಚಿಗಳಾದ ಅವರ ಕಣ್ಣಿಗೆ ಸತ್ಯದ ದಾರಿಯಲ್ಲಿ ನಡೆಯುವ ಮುನ್ಸೀಫ ಹುಚ್ಚನಂತೆ ಕಾಣಿಸುತ್ತಾನೆ. ಪ್ರಕೃತಿಯೊಂದಿಗಿನ ಮುನ್ಸೀಫನ ಅನುಸಂಧಾನ